


ಮತ್ತು ವಂಶವಾಹಿಗಳನ್ನು ತಿರುಚದ ಬೀಜಗಳ (GMO) ಬಳಕೆಯಿಲ್ಲದೇ ಸಂಪೂರ್ಣವಾಗಿ ನೈಸರ್ಗಿಕ ವಿಧಾನಗಳಿಂದ ಬೆಳೆಸಿದ ಆಹಾರವನ್ನು ಸಾವಯವ ಎನ್ನುತ್ತೇವೆ. ಈ ವಿಧಾನ ಮುಖ್ಯವಾಗಿ ಪ್ರಾಣಿ ಮತ್ತು ಸಸ್ಯಜನ್ಯ ಗೊಬ್ಬರ, ಜೈವಿಕ ಕೀಟನಾಶಕ, ಬೆಳೆಗಳ ಆವರ್ತನ, ಯಾವುದೇ ರಾಸಾಯನಿಕಯುಕ್ತ ಕಳೆನಾಶಕಗಳನ್ನು ಬಳಸದಿರುವುದು, ನೈಸರ್ಗಿಕವಾಗಿ ಸಂಸ್ಕರಿತ ಬೀಜಗಳನ್ನು ಬಳಸುವುದೇ ನಮಗೆ ಮತ್ತು ನಮ್ಮ ಭೂಮಿಗೆ ಹಿತವಾದ ಅಂಶಗಳನ್ನು ಒಳಗೊಂಡಿರುತ್ತದೆ. ಈ ಪ್ರಕಾರದ ಬೆಳೆಯಲ್ಲಿ ಕ್ಯಾನ್ಸರ್‌ಕಾರಕ ಅಂಶಗಳು ಕಡಿಮೆಯಿರುತ್ತವೆ ಎಂದು ಹೇಳಲಾಗುತ್ತದೆ.

ಪ್ರಸಕ್ತ ಸಾಂಪ್ರದಾಯಿಕ ಕೃಷಿಗೆ ಹೋಲಿಸಿದಾಗ ಸಾವಯವ ಕೃಷಿಯಲ್ಲಿ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಅಗತ್ಯವಿಲ್ಲದ್ದರಿಂದ, ಪರಿಸರದ ಸಂರಕ್ಷಣೆಯ ಜೊತೆಗೆ ನಾವು ತಿನ್ನುವ ಆಹಾರದಲ್ಲಿ ವಿಷಕಾರಿ ಅಂಶಗಳು ಗಣನೀಯವಾಗಿ ತಗ್ಗುತ್ತವೆ. ಕೃಷಿ ಕಾರ್ಮಿಕರು ವಿಷಕಾರಿ ಕೀಟನಾಶಕಗಳ ಬಳಕೆಯಿಂದಾಗುವ ದುಷ್ಪರಿಣಾಮಗಳಿಂದ ಮುಕ್ತರಾಗುತ್ತಾರೆ. ಅಂತರ್ಜಲದ ಗುಣಮಟ್ಟ ಸುಧಾರಿಸುತ್ತದೆ. ಮಣ್ಣಿನ ಸವಕಳಿಯೂ ಕಡಿಮೆ. ದೀರ್ಘಾವಧಿಯಲ್ಲಿ ಹವಾಮಾನ ಬದಲಾವಣೆಯ ದುಷ್ಪರಿಣಾಮಗಳನ್ನು ತಡೆಗಟ್ಟಬಹುದು. ಜೀವವೈವಿಧ್ಯತೆಯ ಸಹಜವಾದ ಸಹಬಾಳ್ವೆ

India Organic
National Programme for Organic Production

‘ಇಂಡಿಯಾ ಆರ್ಗ್ಯಾನಿಕ್’ ಲೋಗೊ

ಸಾಧ್ಯವಾಗುತ್ತದೆ. ಸರದಿಯಲ್ಲಿ ವಿವಿಧ ಬೆಳೆಗಳನ್ನು ಬೆಳೆಯುವ ಮೂಲಕ ಮಣ್ಣಿನ ಫಲವತ್ತತೆಯನ್ನು ಕೂಡ ಕಾಪಾಡಿಕೊಳ್ಳಬಹುದು. ಹೀಗೆ, ಸಾವಯವ ಕೃಷಿಲಾಭಗಳ ಬಣ್ಣನೆ ನಡೆಯುತ್ತದೆ.

ಹಾಗೆ ನೋಡಿದರೆ ಕೈಗಾರಿಕಾ ಕ್ರಾಂತಿಯ ಮೊದಲು ನಡೆಯುತ್ತಿದ್ದ ಕೃಷಿ ಪದ್ಧತಿ ಯಾವ ರಾಸಾಯನಿಕಗಳ ಬಳಕೆಯಿಲ್ಲದ ಸಾವಯವ ವಿಧಾನವೇ ಆಗಿತ್ತು. ಅರಣ್ಯಕೃಷಿಯಂತಹ ಅದ್ಭುತವಾದ ಪರಿಸರಸ್ನೇಹಿ ಸಾಗುವಳಿ ಪದ್ಧತಿಯೂ ಆಗ ಜೀವಂತವಾಗಿತ್ತು. ಕೈಗಾರಿಕಾ ಕ್ರಾಂತಿಯ ನಂತರದಲ್ಲಿ ಬೇಸಾಯದಲ್ಲಿ ಮಾನವ ಶ್ರಮವನ್ನು ತಗ್ಗಿಸುವ ನಿಟ್ಟಿನಲ್ಲಿ ಸಾಗುವಳಿಗೆ ಸಹಾಯವಾಗುವ ಟ್ರ್ಯಾಕ್ಟರ್‌ನಂತಹ ಕೃಷಿ ಯಂತ್ರೋಪಕರಣಗಳು ಬಳಕೆಗೆ ಬಂದವು.

19ನೆಯ ಶತಮಾನದ ಮಧ್ಯಭಾಗದಲ್ಲಿ ಮೊದಲು ರಾಸಾಯನಿಕ ಗೊಬ್ಬರಗಳನ್ನು ತಯಾರಿಸಲಾಯಿತು. ನಂತರದ ಕಾಲದಲ್ಲಿ 1940ರಲ್ಲಿ ಡಿಡಿಟಿಯನ್ನು ಅಭಿವೃದ್ಧಿಪಡಿಸುವುದರೊಂದಿಗೆ ಕುಖ್ಯಾತವಾದ ರಾಸಾಯನಿಕ ಕೀಟನಾಶಕಗಳ ಯುಗ ಶುರುವಾಯ್ತು.

ನೋಡನೋಡುತ್ತಿದ್ದಂತೆ ಇಳುವರಿಯ ಹೆಚ್ಚಳಕ್ಕಾಗಿ, ರೋಗ ಮತ್ತು ಕೀಟಗಳ ನಿವಾರಣೆಗಾಗಿ ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳು, ತಳಿವಿಜ್ಞಾನದಿಂದ ಮಾರ್ಪಡಿಸಿದ ಬೀಜಗಳು, ರಾಸಾಯನಿಕ ಕಳೆನಾಶಕಗಳು ಸೇರ್ಪಡೆಗೊಂಡು, ಮುಂದುವರಿದ ದೇಶಗಳಲ್ಲಿ ಕೃಷಿಯೂ ಒಂದು ಲಾಭ ಗಳಿಸುವ ಕೈಗಾರಿಕೆಯಾಗಿ ಪರಿವರ್ತನೆಗೊಂಡಿತು. ಕೃಷಿಯಲ್ಲಿ ಮಾನವ ಶ್ರಮ ಗಮನಾರ್ಹವಾಗಿ ಕಡಿಮೆಯಾಯಿತು. ರೈತರ ಸರಾಸರಿ ಕೃಷಿ ಭೂಮಿಯಲ್ಲಿ ಏರಿಕೆಯಾಯ್ತು. ಆದರೆ ನಾವು ತಿನ್ನುವ ಆಹಾರದಲ್ಲಿ ಸೇರುವ ವಿಷಕಾರಿ ರಾಸಾಯನಿಕ ಅಂಶಗಳ ಕುರಿತು ನಿಧಾನವಾಗಿ ಅರಿವು ಮೂಡುತ್ತಿದ್ದಂತೆ ಈ ಬೇಸಾಯದ ವಿಧಾನಗಳ ಕುರಿತು ಅಲ್ಲಲ್ಲಿ ಅನುಮಾನಗಳು ವ್ಯಕ್ತವಾದವು.

1921ರಲ್ಲಿ, ಸಾವಯವ ಬೇಸಾಯದ ಪಿತಾಮಹನೆಂದು ಕರೆಯುವ ಸರ್ ಆಲ್ಬರ್ಟ್ ಹೊವಾರ್ಡ್ ತನ್ನ ಸಸ್ಯಶಾಸ್ತ್ರಜ್ಞೆ ಪತ್ನಿ ಗೇಬ್ರಿಯಲ್